ಟಿ.ಎಂ. ವಿಜಯ್ ಭಾಸ್ಕರ್, ಭಾ.ಆ.ಸೇ.,
ಮುಖ್ಯ ಕಾರ್ಯದರ್ಶಿ
T.M. VIJAY BHASKAR, I.A.S.,
Chief Secretary

ಕರ್ನಾಟಕ ಸರ್ಕಾರ
Government of Karnataka

ಸಂಖ್ಯೆ: ಎಸ್‌ಎಸ್‌ಯು/ಕೋವಿಡ್19/07/2020-21

ದಿನಾಂಕ: 16.05.2020

<u>ಸುತ್ತೋಲೆ</u>

ವಿಷಯ: ರಾಜ್ಯದ ಗಡಿ ಭಾಗದ ಜಿಲ್ಲೆಗಳಲ್ಲಿ ಕೋವಿಡ್19 ನಿಯಂತ್ರಣ ಚಟುವಟಿಕೆಗಳನ್ನು ನಿರ್ವಹಿಸಲು ಅಗತ್ಯವಿರುವ ಲಾಜಿಸ್ಟಿಕ್ಸ್ ಮತ್ತು ಸಿಬ್ಬಂದಿಗಳನ್ನು ನಿಯೋಜನೆ ಮಾಡುವ ಜವಬ್ದಾರಿಯನ್ನು ಪ್ರಾದೇಶಿಕ ಆಯುಕ್ತರುಗಳಿಗೆ ವಹಿಸುವ ಬಗ್ಗೆ.

***

ರಾಜ್ಯದಲ್ಲಿ ಕೋವಿಡ್19 ಸೋಂಕು ಸಕ್ರಿಯವಾಗಿದ್ದು, ದಿನದಿಂದ ದಿನಕ್ಕೆ ಸೋಂಕಿತ ಪ್ರಕರಣಗಳು ಹೆಚ್ಚಾಗಿ ದಾಖಲಾಗುತ್ತಲಿದೆ. ಪ್ರಸ್ತುತ ಲಾಕ್‌ಡೌನ್ ನಿಯಮಗಳು ಸಡಿಲಿಕೆಯಾಗಿದ್ದು, ಅಂತರ್-ರಾಜ್ಯ ಮತ್ತು ಅಂತರ್-ಜಿಲ್ಲೆಗಳಿಂದ ಪ್ರಯಾಣಿಕರು ತಮ್ಮ ಪ್ರದೇಶಗಳಿಗೆ ವಾಪಸ್ಸಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹಾಗೂ ಪ್ರಮುಖವಾಗಿ ಗಡಿ ಜಿಲ್ಲೆಗಳಲ್ಲಿ ಸದರಿ ಪ್ರಯಾಣಿಕರ ಆರೋಗ್ಯ ತಪಾಸಣೆ ನಡೆಸುವುದು, ಸಾಂಸ್ಥಿಕ ಕ್ವಾರೆಂಟೈನ್ ವ್ಯವಸ್ಥೆ ಕಲ್ಪಿಸುವುದು, ಎಲ್ಲಾ ದತ್ತಾಂಶಗಳನ್ನು ವಿವಿಧ ಪೋರ್ಟಲ್‌ಗಳಲ್ಲಿ ನಮೂದಿಸುವುದು ಹಾಗೂ ಇನ್ನಿತರೆ ಕೋವಿಡ್19 ನಿಯಂತ್ರಣ ಚಟುವಟಿಕೆಗಳನ್ನು ನಿರ್ವಹಿಸಲು ಹೆಚ್ಚಿನ ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ.

ಆದ್ದರಿಂದ, <u>ಗಡಿಭಾಗದ ಜಿಲ್ಲೆಗಳಲ್ಲಿ ಕೋವಿಡ್19 ನಿಯಂತ್ರಣ ಚಟುವಟಿಕೆಗಳನ್ನು ಸುಗಮವಾಗಿ ನಿರ್ವಹಿಸಲು ಅವಶ್ಯವಿರುವ ಲಾಜಿಸ್ಟಿಕ್ಸ್ ಹಾಗೂ ಮಾನವ ಸಂಪನ್ಮೂಲದ ನಿರ್ವಹಣೆಯ ಜವಬ್ದಾರಿಯನ್ನು ಸಂಬಂಧಿತ **ಪ್ರಾದೇಶಿಕ ಆಯುಕ್ತರಿಗೆ** ನೀಡಲಾಗಿದೆ. ತಮ್ಮ ಅಧೀನದಲ್ಲಿರುವ ಬೇರೆ ಜಿಲ್ಲೆಗಳ ಲಾಜಿಸ್ಟಿಕ್ಸ್/ಸಿಬ್ಬಂದಿಗಳನ್ನು ಗಡಿಭಾಗದ ಜಿಲ್ಲೆಗಳಿಗೆ ನಿಯೋಜಿಸುವ/ವರ್ಗಾಯಿಸಲು ಕ್ರಮವಹಿಸತಕ್ಕದ್ದು.</u>

16/5

(ಟಿ.ಎಂ.ವಿಜಯ್ ಭಾಸ್ಕರ್)
ಸರ್ಕಾರದ ಮುಖ್ಯ ಕಾರ್ಯದರ್ಶಿ
ಹಾಗೂ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ
ಪ್ರಾಧಿಕಾರದ ಕಾರ್ಯಕಾರಿ ಸಮಿತಿ ಅಧ್ಯಕ್ಷರು

**ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:**

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು ವಿಭಾಗ.
2. ಪ್ರಾದೇಶಿಕ ಆಯುಕ್ತರು, ಬೆಳಗಾವಿ/ಕಲಬುರಗಿ ವಿಭಾಗ.

**ಪ್ರತಿಯನ್ನು ಮಾಹಿತಿಗಾಗಿ:**

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆಕುಕ ಇಲಾಖೆ.

# 320, 3ನೇ ಮಹಡಿ, ವಿಧಾನ ಸೌಧ, ಬೆಂಗಳೂರು - 560 001, ದೂರವಾಣಿ ಕಛೇರಿ: +91-80-22252442 / 22253716 ಫ್ಯಾಕ್ಸ್: +91-80-22258913
# 320, 3rd Floor, Vidhana Soudha, Bengaluru - 560 001, Phone. off. +91-80-22252442 / 22253716 Fax: +91-80-22258913
e-mail : cs@karnataka.gov.in